ದಿನಾಂಕಃ **10.06.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಎಂ.ಆರ್. ವಕೀಲರಿಂದ ಃ**

01. ನಾನು ಪಿ.ಯು.ಸಿ. ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಅಂಶಗಳು ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ವಾದಿ ಹೇಳಿ ತಯಾರು ಮಾಡಿಸಿರುತ್ತಾರೆ. ಪ್ರಸ್ತುತ ದಾವೆಯನ್ನು ಸಣ್ಣೇಗೌಡರು ಕೋಟೇ ತಿಮ್ಮೇಗೌಡರ ಮೇಲೆ ಸರ್ವೆ ನಂ–288 ರಲ್ಲಿನ ಜಮೀನು ಅವರಿಗೆ ಬರಬೇಕೆಂದು ಕೋರುತ್ತ ದಾವೆಯನ್ನು ದಾಖಲು ಮಾಡಿರುತ್ತಾರೆ. ಸರ್ವೆ ನಂ–288 ರ ಜಮೀನಿನ ಚೆಕ್ಕುಬಂದಿ ಪೂಃ ಕೋಟೆತಿಮ್ಮೇಗೌಡರ ಜಮೀನು, ಪಃ ಕಾಳೇಗೌಡರ ಜಮೀನು, ಉಃ ತೋಟಗಾರಿಕೆ ಫಾರಂ, ದಃ ಸಿ.ಆರ್. ಉಮೇಶ್ ರವರ ಸ್ವತ್ತು ಇರುತ್ತದೆ.

2. ಪ್ರತಿವಾದಿ ವಾದಿಯವರು ವಿರುದ್ಧ ದಾಖಲಿಸಿದ್ದ ಅಸಲು ದಾವಾ ಸಂಖ್ಯೆ –9/2022 ಇದರಲ್ಲಿ ನಾನು ಪಕ್ಷಕಾರನಾಗಿರಲಿಲ್ಲ. ಸದರಿ ದಾವೆಯಲ್ಲಿ ನಾನು ಸಾಕ್ಷಿಯಾಗಿ ನುಡಿದಿರುವುದಿಲ್ಲ. ಅಸಲು ದಾವಾ ಸಂಖ್ಯೆ –9/2022 ನ್ನು ಸರ್ವೆ ನಂ–288 ರಲ್ಲಿನ ಸ್ವತ್ತಿಗೆ ಸಂಬಂದಿಸಿದ ದಾವೆಯಾಗಿರುತ್ತದೆ. ಅಸಲು ದಾವಾ ಸಂಖ್ಯೆ –9/2022 ರ ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಯಾವ ಸ್ವತ್ತಿಗೆ ಸಂಬಂದಿಸಿದ ದಾಖಲೆಗಳನ್ನು ಈ ದಾವೆಯಲ್ಲಿ ಪ್ರತಿವಾದಿ ಹಾಜರುಮಾಡಿದ್ದರು ಎಂದು ನನಗೆ ಗೊತ್ತಿಲ್ಲ.

3. ಪ್ರಸ್ತುತ ದಾವೆಯನ್ನು ಸರ್ವೆ ನಂ–268/ಪೈ–ಪಿ–2 ಇದರಲ್ಲಿನ ಸ್ವತ್ತಿಗೆ ಸಂಬಂದಿಸಿದಂತೆ ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ

ಚೆಕ್ಕುಬಂದಿ ಪೂಃ ಕೋಟೇ ತಿಮ್ಮೇಗೌಡರ ಜಮೀನು, ಪಃ ಹಳೇಬೀಡು ಕಾಳೇಗೌಡರವರ ಜಮೀನು, ಉಃ ತೋಟಗಾರಿಕೆ ಫಾರಂ, ದಃಎಲ್.ಕಾಳೇಗೌಡರ ರಾಮೇಗೌಡರವರ ಜಮೀನು ಎಂದರೆ ಸರಿ. ದಾವಾ ಸ್ವತ್ತು ದಿಃ 05.01.1972 ರ ರಂದು ನೊಂದಾಯಿತ ವ್ಯವಸ್ಥಾ ಪತ್ರದಂತೆ ವಾದಿಗೆ ಬಂದಿರುತ್ತದೆ ಎಂದರೆ ಸರಿ. ವಾದಿ ಅಂದಿನಿಂದಲೂ ದಾವಾ ಸ್ವತಿಗೆ ಸಂಬಂದಿಸಿದ ಪತ್ರಗಳು ವಾದಿಯವರ ಹೆಸರಿನಲ್ಲಿ ಇದ್ದು, ಅವರು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದುಕೊಂಡು ಸರ್ಕಾರಕ್ಕೆ ನಿರಂತರವಾಗಿ ಕಂದಾಯವನ್ನು ಕಟ್ಟಿಕೊಂಡು ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

4. ಅಸಲು ದಾವಾ ಸಂಖ್ಯೆ-9/2022 ನ್ನು ಪ್ರತಿವಾದಿಯವರು ವಾದಿಯ ವಿರುದ್ಧ ಸರ್ವೇ ನಂ-268 ರಲ್ಲಿನ 24 ಗುಂಟೆ ಸ್ವತ್ತಿಗೆ ಸಂಬಂದಿಸಿದಂತೆ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯ ದಾವಾ ಸ್ವತ್ತಿನ ಚೆಕ್ಕುಬಂದಿ ಪೂಃ ವಾದಿಯವರ ಜಮೀನು, ಪಃ ಚಿಕ್ಕದಾಸೇಗೌಡರ ರಾಮೇಗೌಡರ ಜಮೀನು, ಉಃ ತೋಟಗಾರಿಕೆ ಫಾರಂ ಏರಿ, ದಃ ತಮ್ಮಂಡಯ್ಯನ ಕರಿಗೌಡರವರ ಜಮೀನು ಎಂದರೆ ಸರಿ. ಪ್ರಸ್ತುತ ದಾವಾ ಸ್ವತ್ತಿನ ಚೆಕ್ಕುಬಂದಿ ಮತ್ತು ಪ್ರತಿವಾದಿಯವರು ಅಸಲು ದಾವಾ ಸಂಖ್ಯೆ-9/2022 ರಲ್ಲಿ ವಾದಿಯವರ ವಿರುದ್ಧ ಡಿಕ್ರಿ ಪಡೆದುಕೊಂಡ ದಾವಾ ಸ್ವತ್ತಿನ ಚೆಕ್ಕುಬಂದಿ ಬೇರೆಯಾಗಿರುತ್ತದೆ ಎಂದರೆ ಸರಿ. ಸರ್ವೇ ನಂ-268 ರಲ್ಲಿ ಒಟ್ಟು ಎಷ್ಟು ಪೈಕಿ ಮತ್ತು ವಿಸ್ತೀರ್ಣದ ಜಮೀನು ಇದೆ ಎಂದು ಹೇಳಲು ಗೊತ್ತಿಲ್ಲ. ಎರಡು ದಾವೆ ದಾವಾ ಸ್ವತ್ತುಗಳ ಸರ್ವೇ ನಂಬರ್ ಬೇರೆ ಬೇರೆಯಾಗಿದ್ದು, ಎರಡು ಬೇರೆ ಬೇರೆ ಜಮೀನಗಳಾಗಿದ್ದು, ಪ್ರತಿವಾದಿಗಳ ಜಮೀನು ಪೈಕಿ ಹೊಂದಿಲ್ಲ ಮತ್ತು ವಾದಿಯವರ ಜಮೀನಿಗೆ ಪೈಕಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎರಡು ದಾವಾ ಸ್ವತ್ತುಗಳ ಚೆಕ್ಕುಬಂದಿ ಬೇರೆ ಮತ್ತು ಒಂದು ಸ್ವತ್ತಿಗೆ ಪೈಕಿಯಾಗಿ ಮತ್ತೊಂದು ಸ್ವತ್ತಿಗೆ ಪೈಕಿಯಾಗದ ಕಾರಣ ಎರಡು ಸ್ವತ್ತುಗಳು ಬೇರೆ ಬೇರೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಯಾವುದೇ ಸ್ವತ್ತು ಇರುವುದಿಲ್ಲ. ದಿಃ

05.01.1972ರ ರಂದು ನೊಂದಾಯಿತ ವ್ಯವಸ್ಥಾ ಪತ್ರದಂತೆ ವಾದಿಯವರು ಸದರಿ ದಿನದಿಂದ ಇಲ್ಲಿಯತನಕ ದಾವಾ ಸ್ವತ್ತಿನ ಸ್ವಾದೀನಾನುಭವದಲ್ಲಿ ಇದ್ದು, ನನಗೆ ಸೇರಿದ ಸ್ವತ್ತು ದಾವಾ ಸ್ವತ್ತಿನ ಸುತ್ತ ಮುತ್ತ ಇರುವುದಿಲ್ಲ, ಆದರೂ ಪ್ರತಿವಾಯೊಂದಿಗೆ ಶಾಮೀಲಾಗಿ ಪ್ರತಿವಾದಿ ಜಮೀನನ್ನು ಲಪಟಾಯಿಸಲು ಸಹಾಯ ಮಾಡುವ ಉದ್ದೇಶದಿಂದ ಅವರಿಗೆ ಪೂರಕವಾದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವದೀನಾನುಭವದಲ್ಲಿ ಪ್ರತಿವಾದಿಯವರು ಇಲ್ಲದೇ ಇದ್ದರು ಸಹ ಅವರಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಿತಾಸಕ್ತಿ ಅಥವಾ ಅಧಿಕಾರ ಇಲ್ಲದೇ ಇದ್ದರು ಸಹ ವಾದಿಗಳ ಸ್ವಾದೀನಾನುಭಕ್ಕೆ ತೊಂದರೆ ಉಂಟುಮಾಡುತ್ತಿದ್ದ ಕಾರಣ ವಾದಿ ಪ್ರಸ್ತುತ ದಾವೆಯನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸಂಬಂದಿಸಿದ ಸರ್ವೇ ನಂ–268/ಪೈ–ಪಿ–2 ಇದರಲ್ಲಿನ ಸ್ವತ್ತಿಗೆ ಸಂಬಂದಿಸಿದ ದಾಖಲೆಗಳನ್ನು ನೋಡಿರುತ್ತೇನೆ. ಸರ್ವೇ ನಂ–268/ಪೈ–ಪಿ–2 ರದರಲ್ಲಿನ ಸ್ವತ್ತಿಗೆ ಸಂಬಂದಿಸಿದ ದಾಖಲೆಗಳು ವಾದಿಯ ಹೆಸರಿನಲ್ಲಿ ಇದ್ದು, ಪ್ರತಿವಾದಿಗೂ ಸ್ವತ್ತಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**